ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 150-154
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡಿಗರ ಪಾತ್ರ

**ಸುರೇಶ್ ಎಸ್ ಉಪ್ಪಾರ**
ಕನ್ನಡ ಸಹಾಯಕ ಪ್ರಾಧ್ಯಾಪಕ, ಬಿ.ಎಲ್.ಡಿ.ಇ ಸಂಸ್ಥೆಯ ನೂತನ ಕಲಾ ಮಹಾವಿದ್ಯಾಲಯ, ತಿಕೋಟಾ

***Abstract:***

*ಭಾರತ ದೇಶವು ಸ್ವಾತಂತ್ರ್ಯವನ್ನು ಪಡೆದು ಇಂದಿಗೂ ಎಪ್ಪತ್ತೈದು ವಸಂತಗಳು ಕಳೆದಿವೆ. ಈ ಅಮೋಘ ಸಂದರ್ಭವನ್ನು ಸ್ಮರಣೀಯವಾಗಿಸಲು ಭಾರತದ ಎಲ್ಲ ರಾಜ್ಯಗಳಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವ ಎಂಬ ಶೀರ್ಷಿಕೆ ಅಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಕರ್ನಾಟಕವೂ ತನ್ನ ಸ್ವಾತಂತ್ರ್ಯ ಹೋರಾಟದ ಕಥೆಗಳನ್ನು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಡಿಯಲ್ಲಿ ನೆನೆಪಿಸಿಕೊಂಡು ಅನೇಕ ಕಾರ್ಯಕ್ರಮಗಳನ್ನು ಆಚರಿಸುತ್ತಿದೆ. ಇತರ ರಾಜ್ಯಗಳಂತೆ ಕರ್ನಾಟಕವೂ ಸ್ವಾತಂತ್ರ್ಯ ಹೋರಾಟದ ಧೈರ್ಯಶಾಲಿ ಕಥೆಗಳನ್ನು ಹೊಂದಿದೆ. ರಾಷ್ಟ್ರೀಯ ನಾಯಕರಿಂದ ಪ್ರಭಾವಿತ ಮತ್ತು ಸ್ಫೂರ್ತಿ ಪಡೆದ ಕರ್ನಾಟಕವು ದೂರದೃಷ್ಟಿಯ ನಾಯಕರನ್ನು ಹೊಂದಿತ್ತು. ಪ್ರಸ್ತುತ ಲೇಖನದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡಿಗರ ಪಾತ್ರವನ್ನು ವಿವರಿಸಲಾಗಿದೆ.*

***Keywords:*** *ಸ್ವಾತಂತ್ರ್ಯ ಚಳುವಳಿ, ಮಹಾತ್ಮ ಗಾಂಧೀಜಿ, ಕರ್ನಾಟಕ ಇತಿಹಾಸ, ಕನ್ನಡಿಗರು, ಬ್ರಿಟಿಷ್.*

## ಪೀಠಿಕೆ

ಬ್ರಿಟಿಷರ ಆಳ್ವಿಕೆಯಿಂದ ರೋಸಿ ಹೋಗಿದ್ದ ಭಾರತೀಯರು ಬ್ರಿಟಿಷರ ವಿರುದ್ಧ ತಿರುಗಿಬಿದ್ದು ಗುಲಾಮತನದಿಂದ ಸ್ವತಂತ್ರರಾಗಲು ನಿರ್ಧರಿಸಿ ಹೋರಾಟ ಪ್ರಾರಂಭಿಸಿದರು. ಇಂತಹ ಹೋರಾಟದಲ್ಲಿ ಅನೇಕ ಪುರುಷರು, ಮಹಿಳೆಯರು, ಮಕ್ಕಳು ಭಾಗವಹಿಸಿ "ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಎಂಬ ದೊಡ್ಡ ಕ್ರಾಂತಿಯನ್ನೇ ಪ್ರಾರಂಭಿಸಿದರು. ಇಂತಹ ಮಹೋನ್ನತ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾವಿರಾರು ಮಹಿಳೆಯರು ಪುರುಷರಷ್ಟೆ ಪ್ರಮುಖ ಪಾತ್ರ ವಹಿಸಿದರು. ಅಂತಹ ಸಾವಿರಾರು ಮಹನೀಯರು ದೇಶಭಕ್ತಿ, ತ್ಯಾಗ, ಬಲಿದಾನ, ಹೋರಾಟ ಮತ್ತು ಸಾಮಾಜಿಕ ಪ್ರಜ್ಞೆಯಿಂದಾಗಿ ದೇಶಕ್ಕೆ ಸ್ವಾತಂತ್ರ್ಯ ಬಂದಿತು.

ಕನ್ನಡಿಗರು ಶೌರ್ಯ ಮತ್ತು ಧೈರ್ಯಕ್ಕೆ ಬಹಳ ಹೆಸರುವಾಸಿಯಾಗಿದ್ದಾರೆ. ತಮ್ಮ ಜೀವನಕ್ಕಿಂತ ಸ್ವಾತಂತ್ರ್ಯ ಹೆಚ್ಚು ಮೌಲ್ಯಯುತವಾಗಿದೆ ಎಂದು ಅವರು ನಂಬಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಬೆಳಗಾವಿ ಜಿಲ್ಲೆಯ ಕಿತ್ತೂರಿನ ಪಾತ್ರ ದೊಡ್ಡದಿದೆ. ಇಲ್ಲಿನ ಹೋರಾಟಗಾರರು ಗಾಂಧಿಜಿಯವರೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದರು. 1857 ರಲ್ಲಿ ಜರುಗಿದ ಸಿಪಾಯಿ ದಂಗೆಯನ್ನು 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂದು ಕರೆಯಲಾಗುತ್ತದೆ. ಸುಮಾರು 25 ವರ್ಷಗಳ ಮೊದಲು ಕಿತ್ತೂರು ನಾಡಿನ ವೀರರಾಣಿ ಚನ್ನಮ್ಮ ಬ್ರಿಟಿಷ್ ಸರಕಾರದ ವಿರುದ್ಧ ಬಂಡಾಯ ಸಾರಿದ್ದರು. 1857ರಲ್ಲಿ ಭಾರತೀಯರು ಬ್ರಿಟಿಷರ

***Please cite this article as:*** ಸುರೇಶ್ ಎಸ್ ಉಪ್ಪಾರ. (2023). ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡಿಗರ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್.* 2(2), 150–154.

ವಿರುದ್ಧ ಬಂಡಾಯವೆದ್ದಾಗ, ಕರ್ನಾಟಕದಲ್ಲೂ ಸ್ವಾತಂತ್ರ್ಯ ಹೋರಾಟ ಮತ್ತೆ ಬಿರುಸಾಯಿತು.

**ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡಿಗರ ಪಾತ್ರ**

ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಗಡಿ ಭಾಗದಲ್ಲಿರುವ ವಿಜಯಪುರ ಜಿಲ್ಲೆಯ ಚಡಚಣ ಅಕ್ಷರಶಃ ಸ್ವಾತಂತ್ರ್ಯ ಹೋರಾಟಗಾರರ ಜನ್ಮಭೂಮಿ. ಮಹಾತ್ಮ ಗಾಂಧೀಜಿಯ ಒಡನಾಡಿಯಾಗಿದ್ದ ಜೀವರಾಜ ದೋಶಿ ಅವರ ನೇತೃತ್ವದಲ್ಲಿ ಈ ಊರಿನ 45ಕ್ಕೂ ಅಧಿಕ ಮಂದಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ. ಈ ಊರಿನ ಸ್ವಾತಂತ್ರ್ಯ ಹೋರಾಟ ಗಾರರೆಲ್ಲ ಗಾಂಧೀವಾದಿಗಳು ಹಾಗೂ ಶಾಂತಿ ದೂತರಾಗಿದ್ದರು. ಹೋರಾಟದಲ್ಲಿದ್ದ ಪ್ರತಿಯೊಬ್ಬರನ್ನೂ ಕಡುಬಡತನ ಕಾಡುತ್ತಿತ್ತು. ಕೆಲವರು ನೇಕಾರಿಕೆ ಮಾಡಿದರೆ ಮತ್ತೆ ಕೆಲವರು ಕೂಲಿ ನಾಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದವರು. ಯಾವುದನ್ನೂ ಲೆಕ್ಕಿಸದೆ 'ಇದ್ದರೂ ದೇಶಕ್ಕಾಗಿ ಸತ್ತರೂ ದೇಶಕ್ಕಾಗಿ' ಎಂಬ ಧ್ಯೇಯದೊಂದಿಗೆ ಹೋರಾಡಿದರು.

**ಸ್ವಾತಂತ್ರ್ಯದ ಪಡೆ ರಚಿಸಿದ್ದ ದೋಶಿ**

ಜೀವರಾಜ ದೋಶಿ ಅವರೇ ಈ ಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ನೀಡಿದರು. ಅವರು ಚಡಚಣದಲ್ಲಿ ಸ್ವಾತಂತ್ರ್ಯದ ಪಡೆಯನ್ನು ರಚಿಸಿಕೊಂಡಿದ್ದರು. ಅಲ್ಲದೇ ಹೋರಾಟಗಾರರು ಜೈಲಿಗೆ ಹೋದ ಸಂದರ್ಭದಲ್ಲಿ ಅವರ ಕುಟುಂಬದವರಿಗೆ ಸಹಾಯ ಮಾಡುತ್ತಿದ್ದರು. ಚಡಚಣ ಹೃದಯ ಭಾಗದಲ್ಲಿರುವ ಅವರ ಮನೆಯಲ್ಲೇ ಸ್ವಾತಂತ್ರ್ಯ ಹೋರಾಟಗಾರರೆಲ್ಲ ಒಟ್ಟು ಸೇರಿ ಹೋರಾಟದ ರೂಪುರೇಷೆ ಬಗ್ಗೆ ಚರ್ಚೆ ನಡೆಯುತ್ತಿತ್ತು. ಜೀವರಾಜ ರಾವಜಿ ದೋಶಿಯ ಜೊತೆ ರಾಮಣ್ಣ ಯಂಕಂಚಿ, ಗಿರಮಲ್ಲ ಚನಬಸಪ್ಪ ಉಮರಾಣಿ, ಮೇಲಗಿರೆಪ್ಪ ಧೋಂಡಪ್ಪ ಉಮರಾಣಿ, ಕಲ್ಲಪ್ಪ ಬಸಪ್ಪ ಜಂಗಮಶೆಟ್ಟಿ, ಗುರುಬಾಳಪ್ಪ ಸಂಗಪ್ಪ ಅಚ್ಚಿಗಾಂವ, ಕಲ್ಲಪ್ಪ ಮಲ್ಲಪ್ಪ ಜವಳಗಿ, ಗುರುಪಾದಪ್ಪ ಸದಾಶಿವಪ್ಪ ಜೀರಂಕಲಗಿ, ಗೋವಿಂದ ಬಾಳಪ್ಪ ನಿರಾಳೆ, ಮಲ್ಲಿಕಾರ್ಜುನ ಸಂಗಪ್ಪ ಕುಸೂರ, ಈರಪ್ಪ ವಿಠೋಬ ಸಾಳಿ, ರಾಚಪ್ಪ ಗುರಪ್ಪ ಸದ್ದಲಗಿ, ರಾಘವಾಚಾರ್ಯ ಮಧ್ವಾಚಾರ್ಯ ಸಂಗಮ, ಕೃಷ್ಣಾಜಿ ಭೀಮಾಜಿ ಕುಲಕರ್ಣಿ, ಇಂದಿರಾಬಾಯಿ ನಾರಾಯಣಾ ಚಾರ್ಯ, ರೇವಣಸಿದ್ದ ಕಲ್ಲಪ್ಪ, ಸಿದ್ದಪ್ಪ ಶಿವಲಿಂಗಪ್ಪ, ಸಾಹೇಬಲಾಲ ಕರಜಗಿ ಪ್ರಮುಖ ಹೋರಾಟಗಾರರು.

ಗಾಂಧೀಜಿ ಅವರ ಸಂದೇಶದ ಮೇರೆಗೆ ಹೋರಾಟ ಮಾಡುತ್ತಿದ್ದರು. ಜೀವರಾಜ ದೋಸಿ ಹಾಗೂ ಯಂಕಂಚಿ ಅವರ ನೇತೃತ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಜನರನ್ನು ಒಂದು ಕೂಡಿಸಿಕೊಂಡು ಗ್ರಾಮದ ಪ್ರತಿಯೊಂದು ಮನೆಗೆ ಹೋಗಿ 'ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳೋಣ' ಎಂದು ಗ್ರಾಮದ ಪ್ರತಿಯೊಂದು ಓಣಿಯಲ್ಲಿ ದೇಶಾಭಿಮಾನದ ಘೋಷಣೆಗಳನ್ನು ಕೂಗುತ್ತಾ, ಜನರಲ್ಲಿ ಜಾಗೃತಿ ಮೂಡಿಸಿ ಗ್ರಾಮದ ದ್ವಾರದ ಮುಂಭಾಗದಲ್ಲಿರುವ ನಾಸಿ ಕಟ್ಟೆಮೇಲೆ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದರು. ಈ ಗ್ರಾಮದ 45 ಮಂದಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದರೂ ಇಲ್ಲಿಯವರೆಗೆ ಈ ಯಾವುದೇ ಹೋರಾಟಗಾರರ ಸ್ಮರಣೆಗಾಗಿ ಒಂದೇ ಒಂದು ಸ್ಮಾರಕ ಕೂಡ ನಿರ್ಮಾಣವಾಗಿಲ್ಲ. ಇದು ಈ ಭಾಗದ ಜನರ ನೋವಿಗೂ ಕಾರಣವಾಗಿದೆ.

**ಚೆನ್ನಬಸಪ್ಪ ಅಂಬಲಿ**

ಚೆನ್ನಬಸಪ್ಪ ಅಂಬಲಿ ಅವಿಭಜಿತ ಬಿಜಾಪುರ (ಇಂದಿನ ವಿಜಯಪುರ) ಜಿಲ್ಲೆಯ ಅಗ್ರಗಣ್ಯ ಕಾಂಗ್ರೆಸ್ ನಾಯಕರಾಗಿದ್ದವರು. ಇವರು ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಕರ್ನಾಟಕದ ಏಕೀಕರಣಕ್ಕಾಗಿ ದುಡಿದ ಮಹನೀಯರು. ಅಂಬಲಿಯವರು ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ಅರ್ಜುಣಗಿ ಗ್ರಾಮದವರು.

1914ರಲ್ಲಿ ಒಂದನೆಯ ಮಹಾಯುದ್ಧ ನಿಧಿಗಾಗಿ ಗ್ರಾಮಕ್ಕೆ ಬಂದವರ ವಿರುದ್ಧ ಮೂರು ದಿನ ಉಪವಾಸ ಮಾಡಿ ಬಂಧನದ ಶಿಕ್ಷೆ ಅನುಭವಿ ಸುವುದರೊಂದಿಗೆ ಇವರು ಸ್ವಾತಂತ್ರ್ಯಹೋರಾಟ

ಪ್ರಾರಂಭಿಸಿದರು. ಗಾಂಧಿಯವರ ಅನುಯಾಯಿಯಾಗಿ ಬಿಜಾಪುರದಲ್ಲಿ ಒಂದು ಸಂಘ ಕಟ್ಟಿ ಭೂಕಂದಾಯ ವಸೂಲಿಯನ್ನು ವಿರೋಧಿಸಿದರು. 1919ರ ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಇವರನ್ನು ಸಂಪೂರ್ಣವಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಎಳೆದು ತಂದಿತು. ಚಳವಳಿಯಲ್ಲಿ ಭಾಗವಹಿಸಿ ಮೊದಲು 1919ರಲ್ಲಿ ಕಾರಾಗೃಹ ಶಿಕ್ಷೆ ಅನುಭವಿಸಿದರು.

ಅನಂತರ ಕಾಯಿದೆ ಭಂಗ ಚಳವಳಿಯಲ್ಲಿ ಜೈಲು (1931) ಸೇರಿ ವಿಜಯಪುರ ಹಾಗೂ ವಿಸಾಪುರಗಳಲ್ಲಿ ಬಂಧನದಲ್ಲಿದ್ದರು. ಸರ್ಕಾರದ ಕಿರುಕುಳ ಹೆಚ್ಚಾದಾಗ ಇವರು ವಿಜಯಪುರ ಬಿಟ್ಟು ಸಂಸಾರ ಸಮೇತ ಸೊಲ್ಲಾಪುರಕ್ಕೆ ಹೋಗಬೇಕಾಯಿತು. ಅಲ್ಲಿ ಜೀವನವನ್ನು ಸಾಗಿಸಲು ನೌಕರಿ ಹಿಡಿದರೂ ಕಾಯಿದೆ ಭಂಗ ಚಳವಳಿಯಲ್ಲಿ ಮತ್ತೆ ಸೇರಿ ಲಷ್ಕರಿ ಕಾನೂನಿನ ಕಾಲದಲ್ಲಿ ಸರ್ಕಾರದ ಕಣ್ಣುತಪ್ಪಿಸಿ ಸೊಲ್ಲಾಪುರದಿಂದ ಮತ್ತೆ ವಿಜಯಪುರಕ್ಕೆ ಬಂದರು. 1930–33ರ ಸಾರ್ವತ್ರಿಕ ಕಾಯಿದೆ ಭಂಗ ಚಳವಳಿಯಲ್ಲಿ ಮುಖ್ಯಪಾತ್ರ ವಹಿಸಿದ್ದಕ್ಕಾಗಿ ಸರ್ಕಾರ ಇವರಿಗೆ ಕಠಿಣಶಿಕ್ಷೆ ವಿಧಿಸಿತು. ಜೈಲುವಾಸದ ಕಾಲದಲ್ಲಿ ಇವರು ಕನ್ನಡ, ಹಿಂದಿ ಮತ್ತು ಮರಾಠಿ ಭಾಷೆಗಳನ್ನು ಕಲಿತರು.

1942ರಲ್ಲಿ ಕಾರ್ಯಕರ್ತರಾಗಿ, ಚಲೇಜಾವ್ ಸಮಿತಿಯ ಅಧ್ಯಕ್ಷರಾಗಿ ದುಡಿದರು. ಟಪಾಲು ಲೂಟಿ ಮಾಡುವುದು, ಸರ್ಕಾರಿ ಮಹತ್ವದ ಕಾಗದಪತ್ರಗಳನ್ನು ಸುಡುವುದು ಮುಂತಾದ ವಿಧ್ವಂಸಕ ಕೃತ್ಯಗಳನ್ನು ಕೈಗೊಂಡರು. ಇವರ ನೇತೃತ್ವದಲ್ಲಿ ಮಿಂಚನಾಳ ಮತ್ತು ಜುಮನಾಳ ರೈಲು ನಿಲ್ದಾಣಗಳು ಅಗ್ನಿಗೆ ಆಹುತಿಯಾದವು. ಮುಂಬಯಿಯಿಂದ ಇಂಗ್ಲೆಂಡಿಗೆ ಬಂಗಾರ, ಸಾಮಾನು ಸರಂಜಾಮು ತುಂಬಿಕೊಂಡು ಹೊರಟ ಹಡಗೊಂದರ ಜಲಸಮಾಧಿ ಮಾಡಿದ ಕೀರ್ತಿ ಇವರದು. ಆ ಕಾಲದಲ್ಲಿ ಇವರನ್ನು ಹಿಡಿದುಕೊಟ್ಟರೆ 5,000 ರೂಪಾಯಿ ಬಹುಮಾನ ಕೊಡುವುದಾಗಿ ಸರ್ಕಾರ ಸಾರಿತು.

1955ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ತಿಕೋಟಾ ವಿಧಾನಸಭಾ ಕ್ಷೇತ್ರ (ಈಗಿನ ಬಬಲೇಶ್ವರ ವಿಧಾನಸಭಾ ಕ್ಷೇತ್ರ)ದಿಂದ 1952 ಮತ್ತು 1957ರಲ್ಲಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾದರು. ಕರ್ನಾಟಕ ಏಕೀಕರಣಕ್ಕಾಗಿ ಮತ್ತು ಅಸ್ಪೃಶ್ಯತೆ ನಿವಾರಣೆಗಾಗಿ ದುಡಿದರು. ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಬೇಕೆಂಬುದು ಇವರ ಹಟವಾಗಿತ್ತು.

ಅಂಬಲಿ ಚೆನ್ನಬಸಪ್ಪನವರು ತಿಕೋಟಾ ತಾಲೂಕಿನಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾಗಿ ರಾಜಕೀಯ ಜೀವನ ಆರಂಭಿಸಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ 1957ರ ರಾಜ್ಯ ಚುನಾವಣೆಯಲ್ಲಿ ಬಸವರಾಜ ನಾದೂರರನ್ನು ಸೋಲಿಸಿ ಶಾಸಕರಾಗಿ ಆಯ್ಕೆಯಾದರು. ಮರಾಠಿ ಭಾಷೆಯ ಮಧ್ಯೆ ಮರೆಯಾಗಿದ್ದ ಕನ್ನಡ ಮತ್ತು ಕನ್ನಡ ನಾಡನ್ನು ಒಂದಾಗಿಸಲು ಶ್ರಮವಹಿಸಿದ ಚೆನ್ನಬಸಪ್ಪನವರು ಕರ್ನಾಟಕದ ಸರ್ದಾರ್ ಪಟೇಲರೆಂದೇ ಬಿಜಾಪುರದಲ್ಲಿ ಖ್ಯಾತರಾದರು. ಎಸ್ ಆರ್ ಕಂಠಿ, ಮುರಿಗೆಪ್ಪ ಸುಗಂಧಿ, ಬಸಪ್ಪ ದಾನಪ್ಪ ಜತ್ತಿ ಮುಂತಾದ ನಾಯಕರ ಒಡನಾಡಿಯಾಗಿದ್ದರು.

ಅಪ್ರತಿಮ ದೇಶಭಕ್ತನಾಗಿ ದೇಶಭಕ್ತರನ್ನು ತಯಾರು ಮಾಡಿದ ಮಹಾನ್ ಸೇನಾನಿ ಸ್ವಾಮಿ ರಾಮಾನಂದ ತೀರ್ಥರು. ಇವರು ಸಿಂದಗಿ ಪಟ್ಟಣದಲ್ಲಿ ಜನ್ಮತಳೆದವರು. ಉಗ್ರ ಲೇಖನಗಳನ್ನು ಬರೆದು ನಾಡಿಗೆ ಹೆಸರಾದ ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕ ಮೊಹರೆ ಹಣಮಂತ್ರಾಯ ದೇವರ ಹಿಪ್ಪರಗಿಯ ನೆಲದವರು. ದೇಶಭಕ್ತ ವಾಸುದೇವ ಫಡಕೆಗೆ ಆಶ್ರಯ ನೀಡಿದ್ದು ಸಿಂದಗಿ ತಾಲೂಕಿನ ದೇವರ ನಾವದಗಿ. ದೇಶದ ಸ್ವಾತಂತ್ರ್ಯಕ್ಕಾಗಿ ಈ ತಾಲೂಕಿನ ಬಹಳ ಜನ ಯೋಧರು ದುಡಿದಿದ್ದಾರೆ. ಅವರು ಮಾಡಿದ ತ್ಯಾಗದ ಫಲವೇ ಇಂದಿನ ಪರಕೀಯ ಮುಕ್ತ ಭಾರತ. ಸಿಂದಗಿ ಬಂಡಾಯದ ನಂತರ ಹೋರಾದ ಕಾವು ಮತ್ತಷ್ಟು ಹೆಚ್ಚಾಗಿತ್ತು. ಗಾಂಧೀಜಿ ಅವರ ಭಾಷಣಕ್ಕೆ ಪ್ರಭಾವಿತರಾದವರು

ತಮ್ಮ ತಮ್ಮ ಊರುಗಳಲ್ಲಿ ಕಾಂಗ್ರೆಸ್ ಕಟ್ಟಿ ದೇಶ ಚಳುವಳಿಗೆ ಧುಮಿಕಿದರು.

**ಸ್ವಾತಂತ್ರ್ಯ ಸೇನಾನಿ ಸ್ವಾಮಿ ರಾಮಾನಂದ ತೀರ್ಥರು**

ಸ್ವಾತಂತ್ರ್ಯ ಸೇನಾನಿ ಸ್ವಾಮಿ ರಾಮಾನಂದ ತೀರ್ಥರು ಸ್ವಾಮಿ ರಾಮಾನಂದ ತೀರ್ಥರು ವಿಜಾಪುರ ಜಿಲ್ಲೆಯ ಸಿಂದಗಿಯಲ್ಲಿ ಭವಾನರಾಯ ಖೇಡಗಿ ಮತ್ತು ಕಮಲಾದೇವಿ ದಂಪತಿಗಳಿಗೆ ಜುಲೈ 26, 1903ರಲ್ಲಿ ಜನಿಸಿದರು. ಇವರ ಮೂಲ ಹೆಸರು ವೆಂಕಟೇಶ ಎಂದಾಗಿತ್ತು. ಭವಾನರಾಯರಿಗೆ ಮೂರು ಹೆಣ್ಣುಮಕ್ಕಳಾದ ನಂತರ ಹುಟ್ಟಿದವರೇ ವೆಂಕಟೇಶ. ಬಾಲ್ಯದಲ್ಲಿಯೇ ಬಹಳ ಬುದ್ಧಿವಂತನಾಗಿದ್ದ.

ಸ್ವಾತಂತ್ರ್ಯ ಹೋರಾಟದಲ್ಲಿ ಕರಪತ್ರ ಹಂಚಲು ಹಣ ಸಾಲದಾದಾಗ, ಹೊಸದಾಗಿ ಮದುವೆಯಾಗಿ ಮನೆಗೆ ಬಂದ ಅತ್ತಿಗೆಯ 10 ತೊಲ ಚಿನ್ನದ ಒಡವೆಯನ್ನು ಕೇಳಿ ಪಡೆದರು. ಚೆನ್ನಬಸಪ್ಪನವರು 1972ರಲ್ಲಿ ಹೃದಯ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು 5 ಲಕ್ಷ ರೂಪಾಯಿಯನ್ನು ದೇಣಿಗೆ ನೀಡಿ, ಶ್ರೀ ಜಯದೇವ ಹೃದ್ರೋಗ ಸಂಸ್ಥೆಯನ್ನು ಸ್ಥಾಪಿಸಲು ಕಾರಣರಾದರು. ಮುಧೋಳ ಸಂಸ್ಥಾನಕ್ಕೆ ಸೇರಿದ್ದ ಹಲಗಲಿಯ ಬೇಡರು ಬಾಬಾಜಿ ನಿಂಬಾಳ್ಕರ್ ಎಂಬಾತನಿಂದ ಪ್ರೇರಿತರಾಗಿ ಅಸ್ತ್ರಗಳ ಕಾಯಿದೆಯನ್ನು ಪ್ರತಿಭಟಿಸಿ 1857 ನವೆಂಬರ್‌ನಲ್ಲಿ ಬಂಡೆದ್ದರು. ಲೆಫ್ಟಿನೆಂಟ್ ಕರ್ನಲ್ ಮಾಲ್ಕಮ್ ಇವರ ವಿರುದ್ಧ ಕಾರ್ಯಾಚರಣೆ ನಡೆಸಿದ. ಬೇಡ ನಾಯಕರಾದ ಜಡಗ್ಯಾ, ಬಾಳ್ಯಾ ಮುಂತಾದ 290 ಜನರನ್ನು ಬಂಧಿಸಿ 19 ಜನರನ್ನು ಗಲ್ಲಿಗೇರಿಸಲಾಯಿತು.

**ಸುರಪುರದ ದೊರೆ ವೆಂಕಟಪ್ಪನಾಯಕ**

ಗುಲ್ಬರ್ಗ ಜಿಲ್ಲೆಯ ಸುರಪುರದ ದೊರೆ ವೆಂಕಟಪ್ಪನಾಯಕ ಬ್ರಿಟಿಷರ ಬೆಳಗಾಂವಿಯ ಸೇನೆಯಲ್ಲಿ ದಂಗೆಯೇಳಲು ಪ್ರಚೋದನೆ ನೀಡಿದ್ದ ವಿಚಾರ ಬ್ರಿಟಿಷರಿಗೆ ತಿಳಿದು ಸಂಧಾನಗಳೆಲ್ಲ ಮುರಿದುಬಿದ್ದು ಯುದ್ಧವಾಯಿತು. ವೆಂಕಟಪ್ಪನಾಯಕ ಕೋಟೆಯಿಂದ ತಪ್ಪಿಸಿಕೊಂಡು, ಹೈದರಾಬಾದಿನ ನಿಜಾಮನ ಸಹಾಯ ಬೇಡಿದ. ಆದರೆ ನಿಜಾಮ ನಾಯಕನನ್ನು ಹಿಡಿದು ಬ್ರಿಟಿಷರಿಗೆ ಒಪ್ಪಿಸಿದ. ವಿಚಾರಣೆಯಾಗಿ ವೆಂಕಟಪ್ಪನಾಯಕನಿಗೆ ನಾಲ್ಕು ವರ್ಷ ಶಿಕ್ಷೆಯಾಗಿ, ದೂರದ ಬಂದೀಖಾನೆಗೆ ಅವನನ್ನು ಸಾಗಿಸುತ್ತಿದ್ದಾಗ ಆತ ದಾರಿಯಲ್ಲೆ ಆತ್ಮಹತ್ಯೆ ಮಾಡಿಕೊಂಡು ಮರಣಹೊಂದಿದ.

ಧಾರವಾಡ ಜಿಲ್ಲೆಯ ನರಗುಂದದ ಪಾಳೆಯಗಾರ ಭಾಸ್ಕರರಾವ್ ಭಾವೆ ದತ್ತಕ ಪ್ರಕರಣದಿಂದಾಗಿ ಬ್ರಿಟಿಷರ ವಿರುದ್ಧ ಸಿಡಿದೆದ್ದ. ಮುಂಡರಗಿ ಭೀಮರಾಯನೆಂಬ ಬ್ರಿಟಿಷ್ ಸರ್ಕಾರದ ಮಾಜಿ ಅಧಿಕಾರಿ, ಹಮ್ಮಿಗೆಯ ಕೆಂಚನಗೌಡ, ಡಂಬಳ, ಸೊರಟೂರು ಮತ್ತು ಗೋವನಕೊಪ್ಪಗಳ ದೇಸಾಯರು ಇವನ ಜೊತೆ ಸಹಕರಿಸಿದರು. ನರಗುಂದ ಮುತ್ತಲು ಹೊರಟ ಮ್ಯಾನ್ಸನ್ ಎಂಬ ಅಧಿಕಾರಿಯನ್ನು ಸುರೇಬಾನ ಎಂಬಲ್ಲಿ ಭಾವೆ ಕೊಂದ. 1858 ಜೂನ್ನಲ್ಲಿ ಮಾಲ್ಕಮ್ ನರಗುಂದ ಕೋಟೆ ಮುತ್ತಿದ. ಬಾಬಾಸಾಹೇಬ ಕೋಟೆಯಿಂದ ಪಾರಾಗಿ, ಮುಂದೆ ವಂಚನೆಗೆ ಈಡಾಗಿ ಬಂಧಿತನಾಗಿ ಬೆಳಗಾಂವಿಯಲ್ಲಿ ಗಲ್ಲಿಗೇರಿಸಲ್ಪಟ್ಟ. ಇದೇ ಕಾಲಕ್ಕೆ ಮುಂಡರಗಿ ಭೀಮರಾಯ ಗದುಗಿನ ಖಜಾನೆ ಲೂಟಿಮಾಡಿ ಕೊಪ್ಪಳದುರ್ಗವನ್ನು ಕೇಂದ್ರವಾಗಿಟ್ಟುಕೊಂಡು ಬ್ರಿಟಿಷರನ್ನು ಪ್ರತಿಭಟಿಸಿದ. ಬ್ರಿಟಿಷ್ ಸೇನೆ ಕೋಟೆಯನ್ನು ಮುತ್ತಲು ಭೀಮರಾಯನೂ ಹಮ್ಮಿಗೆ ಕೆಂಚನಗೌಡನೂ ಹೋರಾಡಿ ಹತರಾದರು. ಅನೇಕರ ಬಂಧನವಾಗಿ 75 ಜನರನ್ನು ಗಲ್ಲಿಗೇರಿಸಲಾಯಿತು. ಮೇಲೆ ಹೇಳಿದ ಕೆಲವರಲ್ಲದೆ ಅನೇಕ ಮಂದಿ ದೇಶಭಕ್ತ ವೀರರು ಹೋರಾಡಿ ತಮ್ಮ ಪ್ರಾಣವನ್ನರ್ಪಿಸಿದ್ದಾರೆ. ಎಲ್ಲ ವೀರ ಹೋರಾಟ ಗಾರರನ್ನು ಬ್ರಿಟಿಷರು ನೇರವಾಗಿ ಸೋಲಿಸಲಾಗಲಿ, ಹಿಡಿಯಲಾಗಲಿ ಆಗದೆ ವಂಚನೆಯಿಂದ, ದ್ರೋಹಿಗಳ ಸಹಾಯದಿಂದ ಹಿಡಿಸಿರುವುದು ಗಮನಿಸಬೇಕಾದ ಅಂಶ. ಇಲ್ಲಿಗೆ 1857–58ರ ಸಶಸ್ತ್ರ ಸ್ವಾತಂತ್ರ್ಯ ಹೋರಾಟ ಕರ್ನಾಟಕದಲ್ಲಿ ಕೊನೆಯಾಯಿತು ಎನ್ನಬಹುದು.

**ಉಪಸಂಹಾರ**

ಆಂದೋಲನವು ಭಾರತದ ಇತರ ಭಾಗಗಳಲ್ಲಿ ಸ್ಥಗಿತಗೊಂಡಿದ್ದರೂ ಎರಡು ವರ್ಷಗಳ ಕಾಲ ಮುಂದುವರೆಯಿತು. 3 ವರ್ಷಗಳ ನಂತರ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಕೊನೆಗೂ ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಂದ ಕನಸು ನನಸಾಯಿತು. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಕರ್ನಾಟಕದ ಕೊಡುಗೆ ಅಪಾರ. ನಾವು ಅವರ ತ್ಯಾಗವನ್ನು ಗೌರವಿಸಬೇಕು ಮತ್ತು ಸಾಮಾಜಿಕ ನ್ಯಾಯವನ್ನು ಖಾತ್ರಿಪಡಿಸುವ ಸಾಮರಸ್ಯ ಮತ್ತು ಶಾಂತಿಯಿಂದ ಒಟ್ಟಿಗೆ ಬದುಕುವ ಗುರಿಯನ್ನು ಹೊಂದಿರಬೇಕು. ಇಂದಿನ ಯುವಕರ ಪ್ರೇರಣೆ ಸ್ವಾತಂತ್ರ್ಯ ಹೋರಾಟಗಾರರ ಕಥೆಗಳಲ್ಲಿ ಜೀವಂತವಾಗಿದೆ. ಅವರ ಜೀವನದ ಹೋರಾಟಗಳು ಜೀವನದಲ್ಲಿ ವ್ಯತ್ಯಾಸವನ್ನು ತೋರಿಸುತ್ತವೆ ಮತ್ತು ಅವರು ನಂಬಿದ ಮತ್ತು ಹೋರಾಡಿದ ಮೌಲ್ಯದ ಇಲಾಖೆ. ನಾವು ಭಾರತದ ಪ್ರಜೆಯಾಗಿ ದೇಶದಲ್ಲಿ ಶಾಂತಿಯುತ ವಾತಾವರಣವನ್ನು ನಿರ್ಮಿಸುವ ಮೂಲಕ ತ್ಯಾಗವನ್ನು ಗೌರವಿಸಬೇಕು.

**ಪರಾಮರ್ಶನ ಗ್ರಂಥಗಳು**


- ಬಾಬು ಕೃಷ್ಣಮೂರ್ತಿ. (2016*). ಸ್ವಾತಂತ್ರ್ಯ ಹೋರಾಟದ ಹೀರೋಗಳು–ಭಾಗ I,* ಸಾಹಿತ್ಯ ಪ್ರಕಾಶನ
- ಬಿಪಿನ್ ಚಂದ್ರ ಮತ್ತು ಇತರರು. (2020). *ಸ್ವಾತಂತ್ರ್ಯಕ್ಕಾಗಿ ಭಾರತದ ಹೋರಾಟ.* (ಅನು: ಸಿ ಬಿ ಕಮತಿ) ನವಕರ್ನಾಟಕ ಪ್ರಕಾಶನ.
- ಮಹಾದೇವ. (2005). *ಸ್ವಾತಂತ್ರ್ಯ ಪೂರ್ವ ಕರ್ನಾಟಕದ ಕರ್ನಾಟಕ ಇತಿಹಾಸ.* ಆಯ್‌ಬಿ ಎಚ್‌ಪಿ ಪ್ರಕಾಶನ.
- Halappa G. S. & M. V. Krishna Rao. (Ed.). (1962). *History of Freedom movement in Karnataka.* Vol-I, Government of Myosr.
- Mallikarjun I. Minch. (2013). Freedom Struggle in Karnataka: Role of Women Freedom Fighters. *Research J. Humanities and Social Sciences*. 4(3): July-September, 289-292.